ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

1) ವಾದ ಪತ್ರದಲ್ಲಿ ಯಾವ ವಸ್ತು ವಿಷಯದ ಬಗ್ಗೆ ತಿದ್ದುಪಡಿ ಮಾಡಲಾಗಿದೆ ಎಂಬುದರ ಬಗ್ಗೆ ತಿಳಿದುಕೊಂಡಿದ್ದಿರಾ ಎಂಬ ಪ್ರಶ್ನೆಗೇ ಸಾಕ್ಷಿಯು ನಿಶಾನೆ ಪಿ-44, 45 ಮತ್ತು 46 ಕ್ರಯ ಪತ್ರಗಳ ವಿವರಗಳ ಬಗ್ಗೆ ತಿದ್ದುಪಡಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಿಶಾನೆ ಪಿ-44, 45 ಮತ್ತು 46 ಕ್ರಯ ಪತ್ರಗಳು ಆಗುವ ಕಾಲಕ್ಕೆ ಮಹದೇಯ್ಯ, ವಿಜೇಂದ್ರ, ಶ್ರೀಕಂಠಯ್ಯ ಮತ್ತು ಆಶಾ ರವರು ನನ್ನ ಬೇಟಿ ಮಾಡಿ ಯಾವುದೇ ವಿಷಯವನ್ನು ತಿಳಿಸಿರುವುದಿಲ್ಲ. ನಿಶಾನೆ ಪಿ-46 ಹಕ್ಕ ಬಿಡುಗಡೆ ಪತ್ರದಲ್ಲಿ ಇರುವ ಪಕ್ಷಗಾರರು ನನ್ನನ್ನು ಬೇಟಿ ಮಾಡಿ ವಿಷಯಗಳನ್ನು ತಿಳಿಸಿರುವುದಿಲ್ಲ.

2) ಅಸಲು ದಾವೆ ಸಂಖ್ಯೆ 54/2014 ದಾವೆಯು ವಿಚಾರಣೆ ಮಾಡಿ ತಿರ್ಮಾನ ಆಗಿರುವುದಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 121 ಅಡಿ ಮತ್ತು ಉತ್ತರ-ದಕ್ಷಿಣ 91 ಅಡಿ ಇರುತ್ತದೆ. ಸಾಕ್ಷಿಯು ಪುನಃ ಪೂರ್ವ-ಪಶ್ಚಿಮ 91 ಅಡಿ ಉತ್ತರ-ದಕ್ಷಿಣ 121 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ವಾದ ಪತ್ರದ ಅನುಸೂಚಿಯಲ್ಲಿ ತಿಳಿಸಿರುವ ಪೂರ್ವ-ಪಶ್ಚಿಮ ಅಳತೆ 121 ಮತ್ತು ಉತ್ತರ-ದಕ್ಷಿಣ 91 ಅಡಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ವಿಸ್ತೀರ್ಣ ಸರಿಯಾಗಿ ಗೊತ್ತಿಲ್ಲದೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನ್ಯಾಯಾಲಯದ ನಿಯೋಗಿಯ ಮೂಲಕ ಅಳತೆ ಮಾಡಲು ನನ್ನ ಅಭ್ಯಂತರ ಇರುವುದಿಲ್ಲ.

3) ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ - ಮೈಸೂರು-ಹಾಸನ ರಸ್ತೆ, ಪಶ್ಚಿಮಕ್ಕೆ- ಲಾಲನಹಳ್ಳಿರಸ್ತೆ, ಉತ್ತರಕ್ಕೆ- ಜೆ ಎಸ್ ಎಸ್ ಹಾಸ್ಟೆಲ್ ಆಸ್ತಿ ಮತ್ತು ದಕ್ಷಿಣಕ್ಕೆ-

ವಿಜೇಂದ್ರ ರವರ ಆಸ್ತಿ ಬರುತ್ತದೆ. ನನಗೆ ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತಿರುವುದಿಲ್ಲ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ